ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 39.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ॥ 30, ಸ್ರ 1909.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ .

1ನೆ ಭಾಗ—ಮೈಸೂರು ಸೀಮೆಯ ಶ್ರೀಮರ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ಮತ್ತು ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮಿಷನರವರು, ಈ ಟ್ಯೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ ಮತ್ತು ಎಜ್ಯುಕೇಷನ ಇನ್‌ಸ್ಪೆಕ್ಟರ್ ಜನರಲ್‌ರವರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು ಡಿಸ್ಟ್ರಿಕ್ಟು ಮತ್ತು ಸೆಷನ್ ಜಡ್ಜ್‌ರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರಿಂಟೆಂಡೆಂಟರು ಫಾರೆಸ್ಟು ಆಫೀಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸುಗಳು.

3ನೆ ಭಾಗ—ಲೆಜಿಸ್‌ಲೇಟಿವ್ ರೆಗ್ಯುಲೇಷ್ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ .

ಮೈಸೂರು ಸೀಮೆಯ ಶ್ರೀಮರ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜ ನ ರ ಲ್ ಮ ತ್ತು ರೆ ವಿ ನ್ಯೂ.

ತಾರೀಖು 22ನೆ ಸೆಪ್ಟಂಬರ್ 1909.

ನಂ. 2861—ಸ್ಯಾನಿಟರಿ 14-09-11, ಘನಹೊಂದಿದ ಮೈಸೂರು ರೆಸಿಡೆಂಟರವರ ಮೊದಲನೇ ಅಸಿಸ್ಟೆಂಟರವರ ಮೂಹೆ ಮಜಕೂರು 1 ನೆ ನಂಬರ್ ಆರ್ಡರ್ 698—ಸಿ. ನೆ ನಂಬರ್ ಇಂಡಾರ್ಸುಮೆಂಟಿನೊಡನೆ ಬಂದ ಮದರಾಸು ಸರ್ಕಾರದವರ ಇದರಡಿ ಕಂಡ ಇಸ್ತಿಹಾರ್ನಾಮೆಯನ್ನು ಸಮಸ್ತರ ತಿಳುವಳಿಕೆಯ ಬಗ್ಗೆ ಪ್ರಕಟಿಸಿ ಇದೆ.

ಉತ್ತರ ಆರ್ಕಾಟು ಡಿಸ್ಟ್ರಿಕ್ಟು ಚಂದ್ರಗಿರಿ ತಾಲ್ಲೂಕು ತಿರುಮಲೆ, ತಿರುಪತಿ ಮತ್ತು ತಿರುಜನೂರಲ್ಲಿ ಮುಂದೆ ನಡೆಯುವ ಶ್ರೀ ವೆಂಕಟೇಶ್ವರಸ್ವಾಮಿ ಬ್ರಹ್ಮೋತ್ಸವಕ್ಕೆ ಸೇಲಂ ಮತ್ತು ಕೊಯಿಮುತ್ತೂರು ಡಿಸ್ಟ್ರಿಕ್ಟುಗಳ ಪೈಕಿ ಪ್ಲೇಗ್‌ವ್ಯಾಧಿಯ ಸೋಂಕು ಇರುವ ತಾಲ್ಲೂಕುಗಳಿಂದಲೂ, ಪ್ಲೇಗು ವ್ಯಾಧಿಯ ಸೋಂಕು ಇರುವದಾಗಿ ಪ್ರಕಟವಾಗಿರುವ ಮದರಾಸು ಪ್ರೆಸಿಡೆನ್ಸಿನ ಬಳಿಗಿನ ಮತ್ತು ಹೊರಗಿನ ಇತರ ಜಾಗಾಗಳಿಂದಲೂ ಬರುವ ಜನರನ್ನು ಅಲ್ಲಿಗೆ ಬಿಟ್ಟರೆ ಅಲ್ಲಿ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಸಭಾ ಸಮೇತರಾದ ಗವರ್ನರವರು ಖಂಡಿತವಾಗಿ ತಿಳಿದಿರುತ್ತಾರಾದುದರಿಂದ,

1897ನೆ ಇಸವಿಯ ಸಾಂಕ್ರಾಮಿಕ ಜಾಡ್ಯಗಳ ಕಾನೂನಿನಿಂದ ತಮಗೆ ಕೊಡೋಣಾದ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸಭಾ ಸಮೇತರಾದ ಗವರ್ನರವರು ಮೇಲ್ಕಂಡ ಉತ್ಸವಕ್ಕೆ ಸದರೀ ಸ್ಥಳಗಳಿಂದ ಯಾರೂ 1909ನೆ ಇಸವಿಯ ಸೆಪ್ಟಂಬರ್ 16ನೆ ಲಾಗಾಯಿತು 26ನೆ ತಾರೀಖಿನ ವರಿಗೂ ಮತ್ತು 1909ನೆ ಅಕ್ಟೋಬರ್ 10ರ ಲಾಗಾಯಿತು 24ನೆ ತಾರೀಖಿನ ವರೆಗೂ (ಉಭಯ ದಿನಗಳೂ ಸೇರಿ) ಹೋಗಕೂಡದೆಂದು ನಿಷೇಧಿಸಿರುತ್ತಾರೆಲ್ಲದೆ, ಸದರೀ ತಾರೀಖುಗಳ ಮಧ್ಯೆ ಈ ಕೆಳಗೆ ಕಂಡ ರೈಲ್

ಸ್ಪೇರ್ಷಗಳಲ್ಲಿ ರೈಲ್ ಮೂಲಕ ಪ್ರಯಾಣಮಾಡಬೇಕೆಂದಿರುವವರಿಗೂ ಅಥವಾ ಮಾಡುವರೆಂದು ನಂಬಲ್ಪಟ್ಟವರಿಗೂ ಟಿಕೆಟ್ಟುಗಳನ್ನು ಕೊಡಕೂಡದೆಂದು ಹುಕುಂ ಮಾಡಿರುತ್ತಾರೆ;

ಈ ಸ್ಪೇರ್ಷಗಳಿಂದ :—ಮದ್ರಾಸು ಮತ್ತು ದಕ್ಷಿಣ ಮರಾಟಾ ರೈಲ್ವೆಯ ಗುಡುಪಲ್ಲಿ, ಕುಪ್ಪಂ, ಮುಳಾನೂರು ಮತ್ತು ಪಾಚೂರು, ದಕ್ಷಿಣ ಇಂಡಿಯನ್ ರೈಲ್ವೆಯ ಸಿಂಗನಲ್ಲೂರು, ಪೋದನೂರು, ಕೊಯಿಮುತ್ತೂರು, ತುಡಿಯಲೂರು, ವೆಟ್ಟುಪಾಳ್ಯಂ, ಮಂಗಳೂರು, ಎಲತ್ತೂರು, ವೆಸ್ಟ್‌ಹಿಲ್, ಕಲ್ಲಿಕೋಟೆ, ಕಲ್ಲಾಯಿ ಮತ್ತು ಫೆರೋಕ್ ಸ್ಪೇರ್ಷಗಳಿಂದ.

ಈ ಸ್ಪೇರ್ಷಗಳಿಗೆ :—ಮದರಾಸು ಮತ್ತು ದಕ್ಷಿಣ ಇಂಡಿಯನ್ ರೈಲ್ವೆಯ ಪಾಕಾಳ, ಪನಪಾಕಂ, ಚಂದ್ರಗಿರಿ, ತಿರುಪತಿ, ವೆಸ್ಟ್ ತಿರುಪತಿ, ಈಸ್ಟ್ ತಿರುಪತಿ, ಚಿರತನೂರು, ರೇಣಿಗುಂಟೆ, ಎರಪೇಡು, ಕಾಳಹಸ್ತಿ, ಎಳ್ಳಕುರ, ಪತ್ತೂರು, ತಡಕ್ಕು, ಪುಡಿ, ಪೆದ್ದಪಾಡು, ಮೂಮಂಡೂರು, ಸೆಟ್ಟಿಗುಂಟೂ ಮತ್ತು ಕೋಡೂರು, ಈ ಸ್ಪೇರ್ಷಗಳಿಗೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಸದರೀ ಉತ್ಸವಕ್ಕೆ ಹೋಗುವವರನ್ನು ವಾಪಸು ಕಳುಹಿಸಲಾಗುವುದು.

2. 1909ನೆ ಇಸವಿ ಆಗಸ್ಟ್ 31ನೆ ತಾರೀಖಿನ ಪೋರ್ಟ್‌ಸೆಂಟ್‌ಜಾರ್ಜ್ ಗೆಜೆಟ್ಟಿನ I A ಭಾಗದ 341ನೆ ನಂಬರ್ ಪುಟದಲ್ಲಿ ಪ್ರಕಟಿಸಿದ 184—ಪಿ. ನೆ ನಂಬರ್ ಇಸ್ತಿಹಾರ್ನಾಮೆಯನ್ನು ಇದರಿಂದ ರದ್ದುಪಡಿಸಿ ಇರುತ್ತೆ.

ತಾರೀಖು 25ನೆ ಸೆಪ್ಟಂಬರ್ 1909.

ನಂ. 3030—ಸ್ಯಾನಿಟರಿ. 4—09—23, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಪ್ಲೇಗು ತಗುಲಿದ ಪ್ರದೇಶವೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳವು ಎರಡು ತಿಂಗಳ ಮೇಲ್ಪಟ್ಟು ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿದೆ.

ಸ್ಥಳ.				ತಾಲ್ಲೂಕು.
ಕುಕ್ಕೂರು	...	...	...	ಟಿ. ನರಸೀಪುರ

ತಾರೀಖು 25ನೆ ಸೆಪ್ಟಂಬರ್ 1909.

ನಂ. 3032—ಸ್ಯಾನಿಟರಿ 4-09-24, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷ್ಷ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21-96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ.				ತಾಲ್ಲೂಕು.
ನೇರಳೆ	...	...	...	ನಂಜನಗೂಡು.

ತಾರೀಖು 25ನೆ ಸೆಪ್ಟಂಬರ್ 1909.

ನಂ. 3034—ಸ್ಯಾನಿಟರಿ 14-09-12, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಉತ್ಸವಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟ್.	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.
ದುರ್ಗಿ ಉತ್ಸವ ಅಥವಾ ಸಂದನ ಕೊಡಂ ಉತ್ಸವ.	ಸತ್ಯಗಾಲ ದಾಖಲೆ ಶಿವಸಮುದ್ರಂ.	ಕೊಳ್ಳೇಗಾಲ.	ಕೊಯಿಮುತ್ತೂರು.	1—10—09	9—10—09	ಮೈಸೂರು ದೇಶದ ಫರ್ಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1909ನೆ ಸೆಪ್ಟಂಬರ್ 20ನೆ ತಾರೀಖಿನ ನಂಬರ್ 703—ಪಿ. ಎಂಡಾರ್ಸ್ಮೆಂಟು ಮೇರಿಗೆ.
				ಉಭಯ ದಿನಗಳೂ ಸೇರಿ.		
ದೀಪಾವಳಿ ಉತ್ಸವ ಅಥವಾ ಜಾತ್ರೆ.	ಮಾದೇಶ್ವರನ ಬೆಟ್ಟಗಳು.	ಡಿಟೋ ...	ಡಿಟೋ ...	5—10—09	13—10—09	ಡಿಟೋ
				ಉಭಯ ದಿನಗಳೂ ಸೇರಿ.		

ತಾರೀಖು 28ನೆ ಸೆಪ್ಟಂಬರ್ 1909.

ನಂ. 3035—ಸ್ಯಾನಿಟರಿ 4—09—22, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷ್ಷ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.				ತಾಲ್ಲೂಕು.
ಚಾಮರಾಜನಗರ	...	...	...	ಚಾಮರಾಜನಗರ.
ಹಿರಿಬೇಗೂರು	...	...	...	ಡಿಟೋ
ತಲಕಂಡ	...	...	...	ನಂಜನಗೂಡು
ನಾಗವಂಗಲ	...	...	...	ನಾಗವಂಗಲ

ತಾರೀಖು 20ನೆ ಫೆಬ್ರವರಿ 1909.

ನಂ. 2780—ಮ್ಯು. 559—07—49, 1906ನೆ ಇಸವಿ 7ನೆ ನಂಬರ್ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ 8ನೆ ಪ್ರಕರಣದ ಮೇರೆಗೆ, ಶಿವಪುರ ಮತ್ತು ಬೆಂಗಳೂರು, ಚನ್ನನದೊಡ್ಡಿ ಎಂಬ ಆಸ್ಪಾಸು ಗ್ರಾಮಗಳ ದೇಖರೇಖಿ ಮದ್ದೂರು ಟವನನ್ನು ಒಂದು ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಬೇಕೆಂದು ಉದ್ದೇಶಿಸಿ ಇದೆ ಎಂಬದಾಗಿ ಸಾದರ್ಮಾಜೋಕ್ತಾದ 1908ನೆ ಇಸವಿ ಡಿಸೆಂಬರ್ 4ನೆ ಮಾರ್ಚಂ ಇಸ್ತಿಹಾರ್ನಾವೆಯನ್ನು 1909ನೆ ಇಸವಿ ಮಾರ್ಚಿ 16ನೆ ತಾರೀಖಿನ ಮೈಸೂರು ಗೆಜೆಟ್ಟಿನ 2ನೆ ಭಾಗದಲ್ಲಿ, ಇಂಗ್ಲೀಷು ಪ್ರತಿಯ 352ನೆ ಪುಟದಲ್ಲಿಯೂ, ಕನ್ನಡ ಪ್ರತಿಯ 147ನೆ ಪುಟದಲ್ಲಿಯೂ ಘಾಯಿಪ್ಸ್ಮಾಡಿ ಇರುವುದಲ್ಲದೆ, ಇಸ್ತಿಹಾರ್ನಾವೆಯಲ್ಲಿ ನಮೂದಾಗುವ ಮದ್ದೂರು ಮತ್ತು ಅದರ ಆಸ್ಪಾಸು ಗ್ರಾಮಗಳ ಬಹಿರಂಗವಾದ ಸ್ಥಳಗಳಲ್ಲಿಯೂ ಚಕಟಾಯಿಸಿ ಇರುವುದರಿಂದಲೂ ಮತ್ತು ಮೇಲ್ಕಂಡ ಬೆಂಗಳೂರು-ಚನ್ನನದೊಡ್ಡಿಯನ್ನು ಮ್ಯುನಿಸಿಪಾಲಿಟಿಯ ಸ್ಥಳಿಕ ಸರಹದ್ದಿನೊಡನೆ ಸೇರಿಸುವದು ಯುಕ್ತವಲ್ಲವೆಂದು ಸರ್ಕಾರದವರಿಗೆ ಕಂಡುಬಂದು ಇರುವುದರಿಂದಲೂ, ಮೈಸೂರು ಶ್ರೀಮನ್ಮಹಾರಾಜಾ ಸಾಹೇಬ್ಬಹದ್ದರವರ ಸರ್ಕಾರದವರು ಸದರಿ ರೆಗ್ಯುಲೇಷನಿನ 4 (1)ನೆ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ, ಬೆಂಗಳೂರು-ಚನ್ನನದೊಡ್ಡಿಯನ್ನು ವಜಾ ಮಾಡಿ ಶಿವಪುರ ಗ್ರಾಮವನ್ನು ಮಾತ್ರಾ ಸೇರಿಸಿ ಸದರಿ ಮದ್ದೂರು ಟವನನ್ನು ಖಾಯಂ ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಿ ಸದರಿ ಮ್ಯುನಿಸಿಪಾಲಿಟಿಯ ಸರಹದ್ದು 1909ನೆ ಅಕ್ಟೋಬರ್ 1ನೆ ತಾರೀಖಿನ ದಿನವೂ ಆ ಅನಂತರವೂ ಮುಂದೆ ನಮೂದಿಸಿರುವ ಪ್ರಕಾರ ಇರಬೇಕೆಂದು ಅಪ್ಪಣೆ ಪಯಪಾಲಿಸಿರುತ್ತಾರೆ :—

ಮೈಸೂರು-ಬೆಂಗಳೂರು ರಸ್ತೆಯ ಪೂರ್ವಕಡೆಯಲ್ಲಿರುವ ಚಾಮನಹಳ್ಳಿ ಗ್ರಾಮದ ಸರ್ವೆ 333ನೆ ನಂಬರಿನ ಉತ್ತರ ಮೂಲೆಯಲ್ಲಿ ಸರಹದ್ದುಲ್ಕೈನು ಪ್ರಾರಂಭವಾಗಿ ದಕ್ಷಿಣಾಭಿಮುಖವಾಗಿ ಅದೇ ರಸ್ತೆಯಲ್ಲಿಯೂ ಮತ್ತು ಮದ್ದೂರು ಗ್ರಾಮದ ಸರ್ವೆ 333, 332, 331, 364, 382, 384, 385, 416, 391, 313, 312, 323, 324, 325, 358, 339, 340, 343, 868 ಮತ್ತು 344ನೆ ನಂಬರುಗಳ ಪಶ್ಚಿಮಗಡಿಯಲ್ಲಿಯೂ ಹೊರಟು ಈ ಪೈಕಿ ಕಡೆ ಸರ್ವೆ ನಂಬರಿನ ನೈರುತ್ಯಮೂಲೆಯನ್ನು ಸೇರುತ್ತದೆ. ಇಲ್ಲಿಂದ ಈಶಾನ್ಯಾಭಿಮುಖವಾಗಿ ಸರ್ವೆ 344ನೆ ನಂಬರಿನ ದಕ್ಷಿಣ ಮತ್ತು ಪೂರ್ವ ಗಡಿ ಲೈನುಗಳಲ್ಲಿಯೂ, 868 ಮತ್ತು 343ನೆ ಸರ್ವೆ ನಂಬರುಗಳ ಪೂರ್ವಗಡಿಯಲ್ಲಿಯೂ, 345ನೆ ಸರ್ವೆ ನಂಬರಿನ ದಕ್ಷಿಣಗಡಿಯಲ್ಲಿಯೂ ಮತ್ತು 346ನೆ ನಂಬರಿನ ಪಶ್ಚಿಮ ಮತ್ತು ದಕ್ಷಿಣ ಗಡಿಗಳಲ್ಲಿಯೂ ಹೊರಟು 353ನೆ ನಂಬರಿನ ವಾಯವ್ಯಮೂಲೆಯನ್ನು ಸೇರುತ್ತದೆ. ಅಲ್ಲಿಂದ ಸರಹದ್ದುಲ್ಕೈನು ದಕ್ಷಿಣಾಭಿಮುಖವಾಗಿ ಸರ್ವೆ 353, 354, 356, 357, 358, 361, 362 ಮತ್ತು 363ನೆ ನಂಬರುಗಳ ಪಶ್ಚಿಮಗಡಿಗಳಲ್ಲಿ ಹೊರಟು ಸರ್ವೆ 363ನೆ ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ. ಅಲ್ಲಿಂದ ತಿರುಗಿಕೊಂಡು ಸರ್ವೆ 363ನೆ ನಂಬರಿನ ದಕ್ಷಿಣಗಡಿಯಲ್ಲಿಯೂ ಮತ್ತು ಸರ್ವೆ 871, 874, 876, 877 ಮತ್ತು 878ನೆ ನಂಬರುಗಳ ಉತ್ತರಗಡಿಯಲ್ಲಿಯೂ ಹೊರಟು ಸರ್ವೆ 878ನೆ ನಂಬರಿನ ವಾಯವ್ಯ ಮೂಲೆಯನ್ನು ಸೇರುತ್ತದೆ. ಅಲ್ಲಿಂದ ಪುನಃ ತಿರುಗಿ ಸರ್ವೆ 878ನೆ ನಂಬರಿನ ಪಶ್ಚಿಮ ಮತ್ತು ದಕ್ಷಿಣಗಡಿ ಲೈನುಗಳಲ್ಲಿಯೂ ಮತ್ತು 877ನೆ ನಂಬರಿನ ದಕ್ಷಿಣಗಡಿಯಲ್ಲಿಯೂ ಹೋಗುತ್ತದೆ. ಅಲ್ಲಿಂದ ಸುತ್ತಿಕ್ಕೊಂಡು ಪಶ್ಚಿಮಕಡೆಯಲ್ಲಿ ಹೋಗಿ ಅಲ್ಲಿಂದ ಸರ್ವೆ 366, 370, 882, 881, 885, 886, 887, 888, 889, 890, 891, 892, 893, 894, 895, 896, 897, 898 ಮತ್ತು 899ನೆ ನಂಬರುಗಳ ಉತ್ತರಗಡಿ ಲೈನುಗಳನ್ನು ಅನುಸರಿಸಿ ಸರ್ವೆ 899ನೆ ನಂಬರಿನ ವಾಯವ್ಯಮೂಲೆಯನ್ನು ಸೇರುತ್ತದೆ. ಅಲ್ಲಿಂದ ಉತ್ತರಾಭಿಮುಖವಾಗಿ ಸರ್ವೆ 858ನೆ ನಂಬರಿನ ಪೂರ್ವಗಡಿಯಲ್ಲಿ ಹೊರಟು ಅಲ್ಲಿ ಪಶ್ಚಿಮಕಡೆಗೆ ತಿರುಗಿ ಆ ನಂಬರಿನ ಉತ್ತರಗಡಿಯನ್ನನುಸರಿಸಿ ಹೋಗುತ್ತದೆ. ಈ ನಂಬರಿನ ವಾಯವ್ಯ ಮೂಲೆಯಲ್ಲಿ ತಿರುಗಿ ಕೆಮ್ಮಣ್ಣು ನಾಲೆಯನ್ನು ದಾಟಿಕೊಂಡು ಸರ್ವೆ 8 2ನೆ ನಂಬರಿನ ಈಶಾನ್ಯಮೂಲೆಯನ್ನು ಸೇರುತ್ತದೆ. ಅಲ್ಲಿಂದ ದಕ್ಷಿಣಾಭಿಮುಖವಾಗಿ ಸರ್ವೆ 832 ಮತ್ತು 695ನೆ ನಂಬರುಗಳ ಪೂರ್ವಗಡಿಗಳಲ್ಲಿ ಹೊರಟು ಸರ್ವೆ 695ನೆ ನಂಬರಿನ ಆಗ್ನೇಯಮೂಲೆಯನ್ನು ಸೇರುತ್ತದೆ. ಈ ಸ್ಥಳದಲ್ಲಿ ಪಶ್ಚಿಮಕ್ಕೆ ತಿರುಗಿ 695 ಮತ್ತು 699ನೆ ಸರ್ವೆ ನಂಬರುಗಳ ದಕ್ಷಿಣಗಡಿಗಳನ್ನನುಸರಿಸಿ ಸರ್ವೆ 699ನೆ ನಂಬರಿನ ನೈರುತ್ಯಮೂಲೆಯನ್ನು ಸೇರುತ್ತದೆ. ಇಲ್ಲಿಂದ ಉತ್ತರಾಭಿಮುಖವಾಗಿ ಅದೇ ಸರ್ವೆ ನಂಬರಿನ ವಾಯವ್ಯಭಾಗವನ್ನು ಸೇರುತ್ತದೆ. ಅಲ್ಲಿ ಗೌಡನಹಳ್ಳಿಗೆ ಹೋಗುವ ಟಣಿಯನ್ನು ದಾಟಿ ಸರ್ವೆ 805ನೆ ನಂಬರಿನ ಈಶಾನ್ಯಮೂಲೆಯನ್ನು ಮುಟ್ಟುತ್ತದೆ. ಅಲ್ಲಿಂದ ನೈರುತ್ಯಾಭಿಮುಖವಾಗಿ ಮೈಸೂರು-ಬೆಂಗಳೂರು ರಸ್ತೆಯಲ್ಲಿ ಹೊರಟು ಗೌಡನಹಳ್ಳಿಯಿಂದ ಬರುವ ಬಂಡಿದಾರಿಯನ್ನು ಮುಟ್ಟುತ್ತದೆ. ಇಲ್ಲಿ ಉತ್ತರಾಭಿಮುಖವಾಗಿ ತಿರುಗಿ ಮೇಲ್ಕಂಡ ರಸ್ತೆಯನ್ನು ದಾಟಿ ಉತ್ತರಾಭಿಮುಖವಾಗಿ ಗೌಡನಹಳ್ಳಿ ಬಂಡಿಜಾಡಿನ ಪಶ್ಚಿಮಕಡೆಯಲ್ಲಿ ಹೊರಟು ಸರ್ವೆ 799ನೆ ನಂಬರಿನ ವಾಯವ್ಯಮೂಲೆಯಲ್ಲಿರುವ ರೈಲ್ವೆ ಭೂಮಿಯನ್ನು ಸೇರುತ್ತದೆ; ಅನಂತರ ದಕ್ಷಿಣಕ್ಕೆ ತಿರುಗಿ ಮೇಲ್ಕಂಡ ಸರ್ವೆ ನಂಬರಿನ ಪಶ್ಚಿಮಗಡಿ ಲೈನಿನಲ್ಲಿ ಹೊರಟು ಅದೇ ಸರ್ವೆ ನಂಬರಿನ ನೈರುತ್ಯಮೂಲೆಯನ್ನು ಸೇರುತ್ತದೆ. ಅಲ್ಲಿಂದ ಪೂರ್ವಾಭಿಮುಖವಾಗಿ ಸರ್ವೆ 799, 810, 811, 817, 818, 819, 828 ಮತ್ತು 829ನೆ ನಂಬರುಗಳ ದಕ್ಷಿಣಗಡಿಗಳಲ್ಲಿ ಹೊರಟು ಸರ್ವೆ 829ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ. ಅಲ್ಲಿಂದ ಉತ್ತರಾಭಿಮುಖವಾಗಿ ಸರ್ವೆ 829ನೆ ನಂಬರಿನ ಪೂರ್ವಗಡಿಯಲ್ಲಿ ಹೊರಟು ಸರ್ವೆ 827ನೆ ನಂಬರಿನ ಸರಹದ್ದು ಲೈನನ್ನು ಮುಟ್ಟಿ, ಅಲ್ಲಿಂದ ಪೂರ್ವಾಭಿಮುಖವಾಗಿ ಅದೇ ಗಡಿಯಲ್ಲಿ 825ನೆ ನಂಬರಿನ ನೈರುತ್ಯಮೂಲೆಯನ್ನು ಸೇರುವವರೆಗೂ ಹೋಗುತ್ತದೆ. ಅಲ್ಲಿಂದ ಉತ್ತರಾಭಿಮುಖವಾಗಿ ಸರ್ವೆ 825ನೆ ನಂಬರಿನ ದಕ್ಷಿಣ ಮತ್ತು ಪೂರ್ವಗಡಿಗಳಲ್ಲಿ ಹೊರಟು, ಮದ್ದೂರು ಕೆರೆಯ ಕೆಮ್ಮಣ್ಣು ಕಾಲವೆಯನ್ನು ಸರ್ವೆ 822 ಮತ್ತು 515ನೆ ನಂಬರುಗಳ ಆಗ್ನೇಯಮೂಲೆಯಲ್ಲಿ ದಾಟುತ್ತದೆ; ಅಲ್ಲಿಂದ ಪೂರ್ವಕ್ಕೆ ತಿರುಗಿ ಅದೇ ಗ್ರಾಮದ ಸರ್ವೇ 1ನೆ ನಂಬರಿನ ಆಗ್ನೇಯಮೂಲೆಯನ್ನು ಸೇರುತ್ತದೆ; ಅಲ್ಲಿಂದ ಉತ್ತರಾಭಿಮುಖವಾಗಿ ಸರ್ವೆ 1 ಮತ್ತು 2ನೆ ನಂಬರುಗಳ ಪೂರ್ವಗಡಿಗಳಲ್ಲಿ ಹೊರಡುತ್ತದೆ; ಅನಂತರ ಪೂರ್ವಾಭಿಮುಖವಾಗಿ ಸರ್ವೆ 859, 860, 861, 862 ಮತ್ತು 864ನೆ ನಂಬರುಗಳ ದಕ್ಷಿಣಗಡಿಗಳಲ್ಲಿ ಹೊರಟು ಸರ್ವೆ 864ನೆ ನಂಬರಿನ ಆಗ್ನೇಯಮೂಲೆಯನ್ನು ಸೇರುತ್ತದೆ; ಆ ಸ್ಥಳದಲ್ಲಿ ಸುತ್ತಾಗಿ ತಿರು

ಗಿಕೊಂಡು ಸರ್ವೆ 865, 866 ಮತ್ತು 863ನೆ ನಂಬರುಗಳ ಪಶ್ಚಿಮಗಡಿಗಳಲ್ಲಿ ಹೊರಟು ಸರ್ವೆ 863ನೆ ನಂಬರಿನ ಆಗ್ನೇಯ ಮೂಲೆಯನ್ನು ಸೇರುತ್ತದೆ; ಅಲ್ಲಿಂದ ಉತ್ತರಾಭಿಮುಖವಾಗಿ ಸರ್ವೆ 863ನೆ ನಂಬರಿನ ಪೂರ್ವ ಸರಹದ್ದಿನಲ್ಲಿ ಹೊರಟು ಸರ್ವೆ 9ನೆ ನಂಬರಿನ ನೈರುತ್ಯಮೂಲೆಯನ್ನು ಸೇರುತ್ತದೆ; ಅನಂತರ ಪೂರ್ವಾಭಿಮುಖವಾಗಿ ಸರ್ವೆ 9ನೆ ನಂಬರಿನ ಆಗ್ನೇಯಮೂಲೆಯನ್ನು ಸೇರಿ ಅಲ್ಲಿಂದ ಉತ್ತರಾಭಿಮುಖವಾಗಿ ಸರ್ವೆ 9ನೆ ನಂಬರಿನ ಪೂರ್ವ ಸರಹದ್ದಿನಲ್ಲಿ ಹೊರಟು ಸರ್ವೆ 12ನೆ ನಂಬರಿನ ನೈರುತ್ಯಮೂಲೆಯನ್ನು ಸೇರುತ್ತದೆ; ಅಲ್ಲಿಂದ ಪೂರ್ವಾಭಿಮುಖವಾಗಿ ಸರ್ವೆ 12 ಮತ್ತು 13ನೆ ನಂಬರುಗಳ ದಕ್ಷಿಣಗಡಿಯಾಗಿ ಹೊರಟು ಸರ್ವೆ 13ನೆ ನಂಬರಿನ ಆಗ್ನೇಯಮೂಲೆಯನ್ನು ಸೇರುತ್ತದೆ; ಅಲ್ಲಿಂದ ಉತ್ತರಕ್ಕೆ ತಿರುಗಿ ಮೈಸೂರು-ಬೆಂಗಳೂರು ರಸ್ತೆಯ ಬಾಜೂದಲ್ಲಿ ನುದ್ದೂರು ಗ್ರಾಮದ ಸರ್ವೆ 13, 16, 17, 270, 271, 272ನೆ ನಂಬರುಗಳ ಪೂರ್ವ ಸರಹದ್ದುಗಳನ್ನನುಸರಿಸಿ, ಮದ್ದೂರುಕೆರೆಯ ಕೋಡಿಪಳ್ಳವನ್ನು ದಾಟಿಕೊಂಡು ಉತ್ತರಾಭಿಮುಖವಾಗಿಯೇ ಮದ್ದೂರು ಗ್ರಾಮದ ಸರ್ವೆ 311 ಮತ್ತು 309ನೆ ನಂಬರುಗಳ ಮತ್ತು ಚನ್ನನಹಳ್ಳಿ ಗ್ರಾಮದ ಸರ್ವೆ 392, 393, 394, 415, 417, 419, 420 ಮತ್ತು 421ನೆ ನಂಬರುಗಳ ಪೂರ್ವಗಡಿಗಳಲ್ಲಿ ಹೋಗುತ್ತದೆ; ಸರ್ವೆ 421ನೆ ನಂಬರಿನ ಈಶಾನ್ಯಮೂಲೆಯಲ್ಲಿ ಪಶ್ಚಿಮಕಡೆಗೆ ತಿರುಗಿ ಸರ್ವೆ 421ನೆ ನಂಬರಿನ ಉತ್ತರಗಡಿಯಲ್ಲಿಯೂ, ಸರ್ವೆ 427ನೆ ನಂಬರಿನ ಪೂರ್ವ ಮತ್ತು ಉತ್ತರಗಡಿಗಳಲ್ಲಿಯೂ ಮತ್ತು 431 ಮತ್ತು 430ನೆ ನಂಬರುಗಳ ಉತ್ತರಗಡಿಗಳಲ್ಲಿಯೂ ಹೊರಟು, ಮದ್ದೂರು ರೈಲ್ವೆ ಸ್ಟೇಷನ್‌ಗೆ ಹೋಗುವ ರಸ್ತೆಯನ್ನು ಸರ್ವೆ 429ನೆ ನಂಬರಿನ ನೈರುತ್ಯಮೂಲೆಯಲ್ಲಿ ದಾಟುತ್ತದೆ. ಅನಂತರ ಪೂರ್ವಾಭಿಮುಖವಾಗಿ ಸರ್ವೆ 429 ಮತ್ತು 428ನೆ ನಂಬರುಗಳ ದಕ್ಷಿಣಗಡಿಗಳಲ್ಲಿ ಹೊರಟು ಸರ್ವೆ 428ನೆ ನಂಬರಿನ ಆಗ್ನೇಯಮೂಲೆಯನ್ನು ಸೇರುತ್ತದೆ; ಈ ಸ್ಥಳದಲ್ಲಿ ಸುತ್ತಿಕೊಂಡು ಸರ್ವೆ 428ನೆ ನಂಬರಿನ ಪೂರ್ವಗಡಿಯಲ್ಲಿಯೂ ಮತ್ತು ಸರ್ವೆ 349ನೆ ನಂಬರಿನ ಪಶ್ಚಿಮಗಡಿಯಲ್ಲಿಯೂ ಹೋಗುತ್ತದೆ; ಸರ್ವೆ 349ನೆ ನಂಬರಿನ ನೈರುತ್ಯಮೂಲೆಯಿಂದ ಸರ್ವೆ 349 ಮತ್ತು 350ನೆ ನಂಬರುಗಳ ದಕ್ಷಿಣಗಡಿಗಳಲ್ಲಿ ಹೋಗುತ್ತದೆ; ಸರ್ವೆ 350ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಉತ್ತರಕ್ಕೆ ತಿರುಗಿ ಆ ನಂಬರಿನ ಪೂರ್ವಗಡಿಯಲ್ಲಿಯೇ ಹೋಗಿ ಸರ್ವೆ 363ನೆ ನಂಬರಿನ ನೈರುತ್ಯಮೂಲೆಯನ್ನು ಮುಟ್ಟಿ, ಪೂರ್ವಾಭಿಮುಖವಾಗಿ ಅದೇ ಸರ್ವೆ ನಂಬರಿನ ದಕ್ಷಿಣಗಡಿಯಲ್ಲಿ ಹೊರಟು ಆ ಸರ್ವೆ ನಂಬರಿನ ಆಗ್ನೇಯಮೂಲೆಯನ್ನು ಸೇರುತ್ತದೆ; ಆ ಸ್ಥಳದಲ್ಲಿ ಸರಹದ್ದು ಲೈನು ಉತ್ತರಕ್ಕೆ ತಿರುಗಿಕೊಂಡು ಮೈಸೂರು-ಬೆಂಗಳೂರು ರಸ್ತೆಯನ್ನನುಸರಿಸಿ ಸರ್ವೆ 363, 360, 359, ಮತ್ತು 334ನೆ ನಂಬರುಗಳ ದಕ್ಷಿಣಗಡಿಗಳಲ್ಲಿ ಹೊರಟು ಮದ್ದೂರು ಕೆರೆಯ ಸಂಣ ನಾಲೆಯನ್ನು ಸೇರುತ್ತದೆ; ಅಲ್ಲಿಂದ ನಾಲೆಯನ್ನು ದಾಟಿಕೊಂಡು ಪೂರ್ವಕ್ಕೆ ತಿರುಗಿ ಬೆಂಗಳೂರು-ಮೈಸೂರು ರಸ್ತೆಯನ್ನು ದಾಟಿಕೊಂಡು ಹೊರಟ ಸ್ಥಾನವನ್ನು ಎಂದರೆ ಸರ್ವೆ 333ನೆ ನಂಬರಿನ ಉತ್ತರಗಡಿಯನ್ನು ಬಂದು ಸೇರುತ್ತದೆ.

ತಾರೀಖು 16ನೆ ಸೆಪ್ಟಂಬರ್ 1909.

ನಂ. 2710—ಮ್ಯು. 559-07-47, 1909ನೆ ಇಸವಿ ಏಪ್ರಿಲ್ 8ನೆ ತಾರೀಖಿನ ಮೈಸೂರು ಗೆಜೆಟ್ಟಿನ IIನೆ ಭಾಗದ ಇಂಗ್ಲಿಷ್ ಗೆಜೆಟ್ಟಿನ 453ನೆ ಪುಟದಲ್ಲಿಯೂ ಕನ್ನಡ ಗೆಜೆಟ್ಟಿನ 174-5ನೆ ಪುಟಗಳಲ್ಲಿಯೂ ಫಾಯಿಷಾದ 1909ನೆ ಮಾರ್ಚಿ 20ನೆ ಮಂಗಳವಾರ ಪ್ರಕಟನೆಯಲ್ಲಿ ನಮೂದಿಸಿರುವ ಸರಹದ್ದುಗಳಲ್ಲಿರುವ ಪ್ರದೇಶವನ್ನೊಳಗೊಂಡು ಕೋಲಾರ್‌ಪೇಟೆ ಊರನ್ನು 1906ನೆ ಇಸವಿಯ VIIನೆ ನಂಬರ್ ಮ್ಯುನಿಸಿಪಲ್ ರೆಗ್ಯುಲೇಷನಿನ 4ನೆ ಪ್ರಕರಣದ ಮೇರೆಗೆ ಬಂದು ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಲು ಉದ್ದೇಶಿಸಿದೆ ಎಂದು ಸದರಿ ರೆಗ್ಯುಲೇಷನಿನ 8ನೆ ಪ್ರಕರಣದ ಮೇರೆಗೆ ಮೇಲ್ಕಂಡ ಪ್ರಕಟನೆಯ ಮೂಲಕ ಕ್ರಮವಾಗಿ ಪ್ರಸಿದ್ಧಪಡಿಸಿರಲಾಗಿ ಸದರಿ ಉದ್ದೇಶಕ್ಕೆ ಆಕ್ಷೇಪಣೆಗಳು ಯಾವುದೂ ಬಂದಿಲ್ಲವಾಗಿರುವ ಕಾರಣ ಮೈಸೂರು ಶ್ರೀಮದ್ ಮಹಾರಾಜಾ ಸಾಹೇಬ್ಬಹದ್ದೂರ್‌ವರ ಸರ್ಕಾರದವರು ಸದರಿ ರೆಗ್ಯುಲೇಷನಿನ 4 (1)ನೆ ಪ್ರಕರಣದಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳನ್ನು ಜಲಾಯಿಸುವುದರಲ್ಲಿ ಸದರಿ ಕೋಲಾರ್‌ಪೇಟೆ ಊರನ್ನು ಬಂದು ಖಾಯಂ ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸತಕ್ಕದ್ದೆಂದು ಹುಕುಂ ಪಡಿಪಾಲಿಸಿರುವುದಲ್ಲದೆ, ಸದರಿ ಮ್ಯುನಿಸಿಪಾಲಿಟಿಯ ಸರಹದ್ದು 1909ನೆ ಅಕ್ಟೋಬರ್ ಗುರ್ರೆ ತಾರೀಖಿನ ದಿವಸವೂ ಆ ತರುವಾಯವೂ ಈ ಕೆಳಗೆ ನಮೂದಿಸುವಂತೆ ಇರತಕ್ಕದ್ದೆಂದು ಪ್ರಸಿದ್ಧಪಡಿಸಿರುತ್ತಾರೆ:—

I. ಕೋಲಾರ್‌ಪೇಟೆ ಟರ್ವ ಸರಹದ್ದು ಮೈಸೂರು-ಬೆಂಗಳೂರು ರಸ್ತೆಗೆ ಲಗತ್ತಾಗಿರುವ ಸದರೀ ಗ್ರಾಮದ ಸರ್ವೆ 168ನೆ ನಂಬರಿನ ಪಾಯವ್ಯ ದಿಕ್ಕಿನಲ್ಲಿ ಪ್ರಾರಂಭಿಸಿ ಸರ್ವೆ 168, 169, 170, 171, 172, 173ನೆ ನಂಬರುಗಳ ಪಶ್ಚಿಮ ಎಲ್ಲೆ ಮಾರ್ಗವಾಗಿ ಬಂದು ಕೊತ್ತಿಪುರ, ಅಮಾನಿಕೆರೆಗೆ ಹೋಗುವ ಟಣಿ ದಾಟಿ ಸರ್ವೆ 186 ಮತ್ತು 32ನೆ ನಂಬರುಗಳ ಪಶ್ಚಿಮ ದಿಕ್ಕಿನಲ್ಲಿ ಹೊರಡುತ್ತೆ. ಇಲ್ಲಿಂದ ಪೂರ್ವಕ್ಕೆ ತಿರುಗಿ ಸರ್ವೆ 32ನೆ ನಂಬರಿನ ಪಶ್ಚಿಮ ಮತ್ತು ದಕ್ಷಿಣ ಎಲ್ಲೆ ಮಾರ್ಗವಾಗಿ ಹೊರಟು ಕೊತ್ತಿಪುರಕ್ಕೆ ಹೋಗುವ ಟಣಿ ದಾಟಿ ಸೀದಾ ದಕ್ಷಿಣ ಮಾರ್ಗವಾಗಿ ಸರ್ವೆ 31ನೆ ನಂಬರಿನ ಪಶ್ಚಿಮ ಎಲ್ಲೆಮೇಲೆ ಮೈಸೂರು-ಬೆಂಗಳೂರು ರೈಲ್ವೆ ಹಾದಿಯನ್ನು ದಾಟುತ್ತೆ. ಇಲ್ಲಿಂದ ಹೊಲಗೆರೆಯನ್ನು ಬಳಸಿಕೊಂಡು ಸರ್ವೆ 30ನೆ ನಂಬರಿನ ದಕ್ಷಿಣ ಎಲ್ಲೆ ಮಾರ್ಗವಾಗಿಯು ಸರ್ವೆ 203ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿಯು ಹೊರಟು ಹುಣಸಿನ ಹಳ್ಳಿಗೆ ಹೋಗುವ ಕಾಲುದಾರಿಯನ್ನು ದಾಟಿ ಪಶ್ಚಿಮಕ್ಕೆ ತಿರಿಗಿ ಸರ್ವೆ 103, 29ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿ ಹೊರಟು ಸರ್ವೆ 73ನೆ ನಂಬರಿನ ಉತ್ತರ ಎಲ್ಲೆಯನ್ನು ಸೇರುತ್ತೆ. ಅಲ್ಲಿಂದ ಮೇಲೆ ನಮೂದಿಸಿದ ರೈಲ್ವೆ ಹಾದಿಯನ್ನು ಪುನಃ ದಾಟಿಕೊಂಡು ಸರ್ವೆ 72ನೆ ನಂಬರಿನ ಈಶಾನ್ಯ ಮೂಲೆಯನ್ನು ಸಂಧಿಸುತ್ತೆ. ಇಲ್ಲಿಂದ ಎಲ್ಲೆಯು ದಕ್ಷಿಣ ಮಾರ್ಗವಾಗಿ ತಿರಿಗಿ ಮೈಸೂರು-ಬೆಂಗಳೂರು ರೈಲ್ವೆ ಹಾದಿ ಮಾರ್ಗವಾಗಿರುವ ಸರ್ವೆ 72, 71, 27 ಮತ್ತು 63ನೆ ನಂಬರುಗಳ ಪೂರ್ವ ಎಲ್ಲೆಯು ಮಾರ್ಗವಾಗಿ ಹೊರಟು ಸರ್ವೆ 62ನೆ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತೆ.

II. ಅಲ್ಲಿಂದ ಎಲ್ಲೆಯು ಸರ್ವೆ 62, 52ನೆ ನಂಬರುಗಳ ಉತ್ತರಮಾರ್ಗವಾಗಿ ಹೊರಟು ಅರ್ಕಾವತಿ ನದಿಗೆ ಹೋಗುವ ಟಣಿಯನ್ನು ದಾಟಿ ಸರ್ವೆ 51ನೆ ನಂಬರಿನ ದಕ್ಷಿಣ, ಪೂರ್ವ ಮತ್ತು ಉತ್ತರ ಎಲ್ಲೆ ಮಾರ್ಗವಾಗಿ ಅರ್ಕಾವತಿನದಿಗೆ ಹೋಗುವ ಟಣಿಯನ್ನು ದಾಟುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 26ನೆ ನಂಬರಿನ ದಕ್ಷಿಣ, ಪೂರ್ವ ಮತ್ತು ಉತ್ತರ ಎಲ್ಲೆಗಳನ್ನು ಬಳಸಿಕೊಂಡು

ಸರ್ವೆ 25, 23ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೊರಟು ಈ ಎರಡು ನಂಬರುಗಳ ಮಧ್ಯೆ ಇರುವ ಟಿಣಿಯನ್ನು ದಾಟುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 23ನೆ ನಂಬರಿನ ಉತ್ತರಮಾರ್ಗವಾಗಿ ಹೊರಟು ನದಿಗೆ ಹೋಗುವ ಟಿಣಿಯನ್ನು ದಾಟುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 22ನೆ ನಂಬರಿನ ದಕ್ಷಿಣಮಾರ್ಗವಾಗಿ ಹೊರಟು ನದಿಗೆ ಹೋಗುವ ಟಿಣಿಯನ್ನು ದಾಟಿ ಸರ್ವೆ 20ನೆ ನಂಬರಿನ ದಕ್ಷಿಣ ಮತ್ತು ಪೂರ್ವ ಎಲ್ಲೆ ಮಾರ್ಗವಾಗಿಯೂ 19ನೆ ನಂಬರಿನ ಪೂರ್ವ ಮತ್ತು ಉತ್ತರ ಎಲ್ಲೆ ಮಾರ್ಗವಾಗಿಯು ಹೋಗುತ್ತೆ. ಅಲ್ಲಿಂದ ಸರ್ವೆ 17ನೆ ನಂಬರಿನ ದಕ್ಷಿಣ, ಪೂರ್ವ ಮತ್ತು ಉತ್ತರ ಎಲ್ಲೆಗಳನ್ನು ಬಳಸಿಕೊಂಡು ಸರ್ವೆ 16, 15, 14, 11, 10, 9, 8ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿ ಹೋಗಿ ಸರ್ವೆ 14, 11, 10ನೆ ನಂಬರುಗಳ ಮಧ್ಯೆ ಅರ್ಕಾವತಿ ನದಿಗೆ ಹೋಗುವ ಎರಡು ಟಿಣಿಗಳನ್ನು ದಾಟುತ್ತೆ. ಅಲ್ಲಿಂದ ಎಲ್ಲೆಯು ಸರ್ವೆ 33ನೆ ನಂಬರಿನ ಮೂರು ಎಲ್ಲೆಗಳನ್ನು ಬಳಸಿಕೊಂಡು ಸರ್ವೆ 116ನೆ ನಂಬರಿನ ಈಶಾನ್ಯ ಎಲ್ಲೆ ಮಾರ್ಗವಾಗಿಯು ಸರ್ವೆ 7ನೆ ನಂಬರಿನ ಪೂರ್ವ ಮತ್ತು ಉತ್ತರ ಎಲ್ಲೆಗಳ ಮಾರ್ಗವಾಗಿಯು ಸರ್ವೆ 6ನೆ ನಂಬರಿನ ದಕ್ಷಿಣ, ಪೂರ್ವ ಮತ್ತು ಉತ್ತರ ಎಲ್ಲೆಗಳ ಮಾರ್ಗವಾಗಿಯು ಹೋಗಿ ಮೈಸೂರು-ಬೆಂಗಳೂರು ರಸ್ತೆ ಹತ್ತಿರ ಅರ್ಕಾವತಿ ನದಿಯ ಬಳಿಯಣ ಸೇತುವೆಯನ್ನು ಸಂಧಿಸುತ್ತೆ.

III. ಅಲ್ಲಿಂದ ಎಲ್ಲೆಯು ಮೈಸೂರು-ಬೆಂಗಳೂರು ರಸ್ತೆಯನ್ನು ದಾಟಿಕೊಂಡು ಸರ್ವೆ 117, 119ನೆ ನಂಬರಿನ ಪಶ್ಚಿಮ ಎಲ್ಲೆ ಮಾರ್ಗವಾಗಿಯು ಅರ್ಕಾವತಿ ಪೂರ್ವದಡದ ಮಾರ್ಗವಾಗಿಯೂ ಹೋಗಿ ಸರ್ವೆ 119ನೆ ನಂಬರಿನ ನೈರುತ್ಯ ಎಲ್ಲೆಯನ್ನು ಸಂಧಿಸುತ್ತೆ. ಇಲ್ಲಿಂದ ಎಲ್ಲೆಯು ಸರ್ವೆ 119-5ನೆ ನಂಬರುಗಳ ಪಶ್ಚಿಮ ಎಲ್ಲೆ ಮಾರ್ಗವಾಗಿ ಹೋಗುತ್ತೆ. ಅಲ್ಲಿಂದ ಎಲ್ಲೆಯು ಪೂರ್ವಕ್ಕೆ ತಿರುಗಿ ಸರ್ವೆ 120ನೆ ನಂಬರಿನ ದಕ್ಷಿಣ ಮತ್ತು ಪೂರ್ವ ಎಲ್ಲೆ ಮಾರ್ಗವಾಗಿಯು ಸರ್ವೆ 123, 124ನೆ ನಂಬರುಗಳ ಪೂರ್ವ ಎಲ್ಲೆ ಮಾರ್ಗವಾಗಿಯು ಹೊರಟು ವೀಲೆ ನಮೂದಿಸಿದ ಎರಡು ನಂಬರುಗಳ ಮಧ್ಯೆ ನದಿಗೆ ಹೋಗುವ ಟಿಣಿಯನ್ನು ದಾಟುತ್ತೆ. ಅಲ್ಲಿಂದ ಎಲ್ಲೆಯು ಪೂರ್ವಕ್ಕೆ ತಿರಿಗಿ ಸರ್ವೆ 4ನೆ ನಂಬರಿನ ದಕ್ಷಿಣ ಮತ್ತು ಪೂರ್ವ ಎಲ್ಲೆ ಮಾರ್ಗವಾಗಿ ಹೋಗಿ ಅರ್ಕಾವತಿಗೆ ಹೋಗುವ ಟಿಣಿಯನ್ನು ಹಾದು ಸರ್ವೆ 133ನೆ ನಂಬರಿನ ದಕ್ಷಿಣ ಮತ್ತು ಪೂರ್ವ ಎಲ್ಲೆ ಮಾರ್ಗವಾಗಿಯು ಸರ್ವೆ 130ನೆ ನಂಬರಿನ ಪೂರ್ವ ಎಲ್ಲೆ ಮಾರ್ಗವಾಗಿಯು ನದಿಗೆ ಹೋಗುವ ಟಿಣಿಯನ್ನು ಪುನಃ ಹಾದು ಸರ್ವೆ 139ನೆ ನಂಬರಿನ ದಕ್ಷಿಣ ಮಾರ್ಗವಾಗಿ ಹೊರಟು ಸರ್ವೆ 1ನೆ ನಂಬರಿನ ಪಶ್ಚಿಮ ಮತ್ತು ಉತ್ತರ ಎಲ್ಲೆ ಮಾರ್ಗವಾಗಿ ಸರ್ವೆ 140ನೆ ನಂಬರಿನ ದಕ್ಷಿಣಕ್ಕೆ ಹೋಗಿ ವಡೇರಹಳ್ಳಿಗೆ ಹೋಗುವ ಕಾಲುದಾರಿ ಮಾರ್ಗವಾಗಿ ಕೆಂಚದೂರ ಹೋಗಿ ಮೇಲೆ ನಮೂದಿಸಿದ ಕಾಲುದಾರಿಯನ್ನು ಹಾದು ಸರ್ವೆ 141ನೆ ನಂಬರಿನ ಉತ್ತರ ಎಲ್ಲೆ ಮಾರ್ಗವಾಗಿ ಹೋಗುತ್ತೆ. ಅಲ್ಲಿಂದ ಎಲ್ಲೆಯು ಮೈಸೂರು-ಬೆಂಗಳೂರು ರಸ್ತೆಯನ್ನು ಹಾದು ಸರ್ವೆ 168ನೆ ನಂಬರಿನ ವಾಯವ್ಯ ಮೂಲೆಯನ್ನು ಸೇರುತ್ತೆ.

ಇದರಿಂದ ಇದರಡಿಯಲ್ಲಿ ಕಂಡ ಜಮೀನುಗಳು ಕ್ಲೋಸ್‌ಪೇಟೆ ಮ್ಯುನಿಸಿಪಾಲಿಟಿಯ ಸರಹದ್ದಿನೊಳಗೆ ಸೇರಿರುತ್ತೆ.

ರಿವಿನ್ಯೂ ಸರ್ವೆ 1, 2, 3, 5, 27, 28, 63, 71, 72, 117, 118, 119ನೆ ನಂಬರುಗಳು ಮತ್ತು ಸರ್ವೆ 141 ದಾಖಲೆ ಕೆಟ್ಟಿಹಳ್ಳಿ.

ತಾರೀಖು 22ನೆ ಸೆಪ್ಟೆಂಬರ್ 1909.

ನಂ. ಜ. 1917—ಜ. ಮಿ. 42-09-22, 1907ನೆ ಇಸವಿ ಜೂನ್ 27ನೆ ಮರುಂನ ಜ. 8139—ಜ. ಮಿ. 12-06-6ನೆ ನಂಬರ್ ಸರ್ಕಾರಿ ಹುಕುಂ ಸಹಿತ ಫಾಯಿಷ್ಮಾಡೋಣಾದ ನಿಬಂಧನೆಗಳ ಪೈಕಿ 2ನೆ ನಿಬಂಧನೆಯ 2 (a) ಉಪಕಲಂ ಅನುಸರಿಸಿ, 1ನೆ ತರಗತಿಯ ಅವಲ್‌ದಾರ್ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್ ಪೋಲೀಸು ಅಸಿಸ್ಟೆಂಟ್ ಸೂಪರಿಟೆಂಡೆಂಟರಾದ ಮಿ|| ಬಿ. ರಾಮಸ್ವಾಮಯ್ಯ, ಬಿ.ಎ., ರವರನ್ನು 1909ನೆ ಇಸವಿ ಆಗಸ್ಟ್ 25ನೆ ತಾರೀಖು ಲಾಗಾಯಿತು ಬಿ. ಷೆಡ್ಯೂಲಿನ 5ನೆ ತರಗತಿ ಅಸಿಸ್ಟೆಂಟ್ ಕಮಿಷನರನ್ನಾಗಿ ಮೊಕರರ್ರಾಡಿ ಇರುತ್ತೆ.

ತಾರೀಖು 22ನೆ ಸೆಪ್ಟೆಂಬರ್ 1909.

ನಂ. ಜ. 1918—ಜ. ಮಿ. 22-08-81, ಮಿ||ಬಿ. ಶ್ಯಾಮಣ್ಣ, ಬಿ.ಎ, ಎಲ್.ಸಿ. ಇ., ಯವರಿಗೆ ಬಿ ಷೆಡ್ಯೂಲಿನ ಅಸಿಸ್ಟೆಂಟ್ ಕಮಿಷನರುಗಳಲ್ಲಿ 4ನೆ ತರಗತಿಗೆ ಬಡ್ತಿಕೊಟ್ಟರುವ 11—3—09ನೆ ಮರ್ಕುಂನ ಜ. 790—ಜ. 22-08-71ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ "1909ನೆ ಇಸವಿ ಜುಲೈ ಗುರ್ರೆ ಲಾಗಾಯಿತು" ಎಂಬದಕ್ಕೆ ಬದಲಾಗಿ "1909ನೆ ಇಸವಿ ಆಗಸ್ಟ್ 2ನೆ ತಾರೀಖು ಲಾಗಾಯಿತು" ಎಂತಾ ಓದಿಕೊಳ್ಳಬೇಕು.

ತಾರೀಖು 22ನೆ ಸೆಪ್ಟೆಂಬರ್ 1909.

ನಂ. 2860—ಮೆಡಿಕಲ್. 19-09-6, 1909ನೆ ಇಸವಿ ಜುಲೈ 28 ಮತ್ತು ಆಗಸ್ಟ್ 11ನೆ ತಾರೀಖುಗಳ 1080—ಮೆಡಿಕಲ್. 19-08-2 ಮತ್ತು 1470—ಮೆಡಿಕಲ್. 19-09ನೆ ನಂಬರು ಇಸ್ತಿಹಾರುನಾಮೆಗಳಲ್ಲಿ, ಹಾನರರಿ ಸರ್ಜನ್‌ರಾದ ಮಿ|| ಡಿ. ಬಸಪ್ಪನವರಿಗೆ ಕೊಟ್ಟಿದ್ದ 60 ದಿನಗಳ ಪ್ರಿವಿಲೇಜ್ ರಜಾ ಜತೆಗೆ ಇನ್ನೂ 5 ದಿನಗಳ ರಜಾವನ್ನು ಹೆಚ್ಚಾಗಿ ಕೊಟ್ಟು ಇರುತ್ತದೆ.

ತಾರೀಖು 24ನೆ ಸೆಪ್ಟೆಂಬರ್ 1909.

ನಂ. ಜು. 941—ಕೋರ್ಟು 40-09-6, 1909ನೆ ಇಸವಿ ಆಗಸ್ಟ್ 13 ಮತ್ತು 31ನೆ ಮರ್ಕುಂಗಳ ಜು. 467—ಕೋರ್ಟು 40-09-2 ಮತ್ತು ಜು. 649—ಕೋರ್ಟ್ 40-09-4ನೆ ನಂಬರ್ ಸರ್ಕಾರಿ ಇಸ್ತಿಹಾರ್ನಾಮೆಗಳಲ್ಲಿ ಮದ್ದಗಿರಿ ಮುನಸಿಫರಾದ ಮಿ|| ಎ. ಕೆ. ಶ್ರೀನಿವಾಸರಾಘವಾಚಾರ್, ಬಿ.ಎ., ಬಿ.ಎಲ್. ರವರಿಗೆ ಮಂಜೂರ್ಮಾಡಿದ್ದ ಪೂರಾ ತಲಬಿನ ಒಂದುತಿಂಗಳ ಪ್ರಿವಿಲೇಜು ರಜಾ ಜತೆಗೆ ಅರ್ಧತಲಬಿನ ಎರಡುದಿನಗಳ ರಜಾವನ್ನು ಜಾಸ್ತಿಯಾಗಿ ಕೊಟ್ಟು ಇರುತ್ತೆ.

ತಾರೀಖು 2 ನೆ ಸೆಪ್ಟಂಬರ್ 1909.

ನಂ. ಜ್ಯು. 986—ಕೋರ್ಟ್ 5-09-6, 1904ನೆ ಇಸವಿಯ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೆ ಪ್ರಕರಣವನ್ನನುಸರಿಸಿ, ಇದರಡಿ ಕಂಡ ದೊಡ್ಡ ಮನುಷ್ಯರುಗಳನ್ನು 2ನೆ ತರಗತಿಯ ಮ್ಯಾಜಸ್ಟ್ರೇಟರುಗಳನ್ನಾಗಿ ನೇಮಿಸಿ ಇರುತ್ತದೆ, ಅದೇ ಕೋಡಿನ 15ನೆ ಪ್ರಕರಣವನ್ನನುಸರಿಸಿ, ಈ ಪೈಕಿ ಇಬ್ಬರು ಯಾ ಹೆಚ್ಚು ಸಂಖ್ಯೆಯವರು, ಬೆಂಚು ಮ್ಯಾಜಸ್ಟ್ರೇಟರಾಗಿ ಕೂತುಕೊಂಡು, ಬೆಂಗಳೂರು ಸಿಟಿಗೆ ಸಂಬಂಧಪಟ್ಟ ವೊಕದ್ದಮೆಗಳ ಪೈಕಿ ಬೇಗಳೂರು ಡಿಸ್ಟ್ರಿಕ್ಟು ಮ್ಯಾಜಸ್ಟ್ರೇಟರವರು ರಿಫರ್ ಮಾಡುವಂಥ ಯಾ ಗೊತ್ತು ಮಾಡುವಂಥ ತರಹೆಯ, ವೊಕದ್ದಮೆಗಳನ್ನು ದರ್ಯಾಫ್ತ್ ಮಾಡಬೇಕು.

1. ಮಿ॥ ಪಿ. ಸಿಂಗಾಚಾರ್ಯರವರು, ಪಿಂಛ್ಹರ್ ಸಬ್ ಜಡ್ಜಿಯರು.
2. ,, ಎಸ್. ವರದರಾಜಯ್ಯಂಗಾರ್ಯರವರು ಡಿಟೋ
3. ,, ಎಚ್. ರಾಮಯ್ಯನವರು ಪಿಂಛ್ಹರ್ ಅಸಿಸ್ಟೆಂಟ್ ಸೆಕ್ರಿಟರಿ.
4. ,, ಬೇಲಿ ಶ್ರೀನಿವಾಸರಾಯರವರು, ಪಿಂಛ್ಹರ್ ಅಮಲ್ದಾರ್.
5. ,, ಎಂ. ಸುಬ್ಬಯ್ಯ, ಬಿ.ಎ., ಯವರು (ಮಿ॥ ರುದ್ರಪ್ಪ ಅಂಡ್ ಸನ್).
6. ,, ಆರ್. ಅಬ್ದುಸ್ಸಖಾರ್ (ಚೌಬೀನ ವ್ಯಾಪಾರಿ.
7. ,, ಆದೆಪ್ಪನವರು (ವರ್ತಕರು).
8. ,, ಶಂಕರಯ್ಯ ಶೆಟ್ಟಿಯವರು (ವರ್ತಕರು).
9. ,, ಮಿಯಾ ಮಹಮ್ಮದ್ ಗೌಸ್ ರಜ್ವಿ (ಸ್ಟೇಟ್ ಪೆನ್ಷನರ್).
10. ,, ಬಿ. ಕೆ. ಗರುಡಾಚಾರ್ಯರವರು (ವರ್ತಕರು).

2. 1904ನೆ ಇಸವಿಯ ಕ್ರಿಮಿನಲ್ ಪ್ರೊಸಿಡ್ಯೂರು ಕೋಡಿನ 261ನೆ ಪ್ರಕರಣದ ನಿಯಮಗಳನ್ನನುಸರಿಸಿ, ಅದೇ ಪ್ರಕರಣದಲ್ಲಿ ವಿವರಿಸಿರುವ ತಮಾಂ ಅಥವಾ ಆ ಪೈಕಿ ಯಾವುದಾದರೂ ತಕ್ಕೀರುಗಳನ್ನು ಫೂಟುಗಿ ದರ್ಯಾಫ್ತ್ ಮಾಡುವ ಅಧಿಕಾರವನ್ನು ಸದರಿ ಬೆಂಚ್ ಮ್ಯಾಜಸ್ಟ್ರೇಟರುಗಳಿಗೆ ಕೊಟ್ಟು ಇರುತ್ತದೆ.

ತಾರೀಖು 27ನೆ ಸೆಪ್ಟಂಬರ್ 1909.

ನಂ. ಜ್ಯು. 989—ಕೋರ್ಟು 69-09-5, ಮೈಸೂರು ಸರ್ವಿಸ್ಸು ರೆಗ್ಯುಲೇಷನಿನ 155ನೆ ಪ್ರಕರಣವನ್ನನುಸರಿಸಿ, ಶಿವಮೊಗ್ಗ ಡಿವಿಜನ್ ಡಿಸ್ಟ್ರಿಕ್ಟು ಮತ್ತು ಸೆಷನ್ಸ್ ಜಡ್ಜಿಯರಾದ ಮಿ॥ ಆರ್. ಬಿ. ಪ್ಲಮರ್‌ರವರಿಗೆ 1909ನೆ ಇಸವಿ ಅಕ್ಟೋಬರ್ 4ನೆ ತಾರೀಖು ಲಾಗಾಯಿತು ಮೂರು ತಿಂಗಳ ಪ್ರಿವಿಲೇಜು ರಜಾವನ್ನು ಇದರ ಜತೆಗೆ ಮೆಡಿಕಲ್ ಸರ್ಟಿಫಿಕೇಟು ಮೇಲೆ 12 ತಿಂಗಳ ರಜಾವನ್ನೂ ಕೊಟ್ಟಿರುತ್ತದೆ.

2. ಮೇಲ್ಕಂಡ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರ್ಯಂತ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿರುವ ಮಿ॥ ಮಿರ್ ಹಂಜಾಹುಸೇನ್, ಬಿ.ಎ., ಬಿ.ಎಲ್. ರವರು ಶಿವಮೊಗ್ಗ ಡಿವಿಜನಿನ ಡಿಸ್ಟ್ರಿಕ್ಟು ಮತ್ತು ಸೆಷನ್ಸ್ ಜಡ್ಜಿ ಕೆಲಸವನ್ನು ಹಂಗಾಮಿ ತರೀಕ್ ನೋಡತಕ್ಕದ್ದು.

ತಾರೀಖು 14ನೆ ಸೆಪ್ಟಂಬರ್ 1909.

ನಂ. ರೆ. 2317—ಲ್ಯಾ. ರೆ. 61-09-4, ಚಳ್ಳಕೆರೆ ತಾಲ್ಲೂಕು ಅಮಲ್ದಾರರಾದ ಮಿ॥ ಎಂ. ಎಸ್. ರಾಮಚಂದ್ರರಾವ್, ಬಿ.ಎ.,ಬಿ.ಎಲ್. ಯವರಿಗೆ 7—8—09ನೆ ಮತ್ತು ಮಿನ ರೆ. 1217—ಲ್ಯಾ. ರೆ. 61-09-2ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೇಜ್ ರಜಾ ಜತೆಗೆ ಇನ್ನೂ ಒಂದು ತಿಂಗಳ ಜಾಸ್ತಿ ರಜಾ ಕೊಟ್ಟಿರುತ್ತದೆ.

2. ಮೇಲ್ಕಂಡ ಇಸ್ತಿಹಾರ್ನಾಮೆಯಲ್ಲಿ ಮಂಜೂರ್ಮಾಡಿದ್ದ ಹಂಗಾಮಿ ಏರ್ಪಾಡೇ ಮುಂದೆಯೂ ಜಾರೀಲಿರಬೇಕು.

ತಾರೀಖು 17ನೆ ಸೆಪ್ಟಂಬರ್ 1909.

ನಂ. ರೆ. 2414—ಲ್ಯಾ. ರೆ. 75-09-5, ಇದರಡಿ ಕಂಡ ಅಮಲ್ದಾರ್‌ರುಗಳ ವರ್ಗಾವರ್ಗಿಯನ್ನು ಮಂಜೂರ್ಮಾಡಿ ಇರುತ್ತದೆ :—

1. ರಜಾದಮೇಲೆ ಇರುವ ಅಮಲ್ದಾರ್ ಮಿ॥ ಕೆ. ಶ್ರೀನಿವಾಸರಾವ್, ಬಿ.ಎ. ಯವರನ್ನು ಚಿಕ್ಕಬಳ್ಳಾಪುರದಿಂದ ವೊಳಕಾಲ್ಮುರು ತಾಲ್ಲೂಕಿಗೆ.
2. ಮಿ॥ ಅಬ್ದುಲ್‌ಹಕ್ಕಿಂ, ಬಿ.ಎ. ಯವರನ್ನು ವೊಳಕಾಲ್ಮೂರಿನಿಂದ ಚಿತ್ರದುರ್ಗ ತಾಲ್ಲೂಕಿಗೆ.

ತಾರೀಖು 20ನೆ ಸೆಪ್ಟಂಬರ್ 1909.

ನಂ. ರೆ. 2453—ಲ್ಯಾ. ರೆ. 133-09-1, ಸರ್ಕಾರದ ಕೆಲಸದ ಅನುಕೂಲಕ್ಕೋಸ್ಕರ ಇದರಡಿ ಕಂಡ ಅಸಿಸ್ಟೆಂಟ್ ಕಮಿಷನರುಗಳ ವರ್ಗಾವರ್ಗಿಯನ್ನು ಮಂಜೂರ್ಮಾಡಿ ಇರುತ್ತದೆ.

ಮಿ॥ ಜಿ. ಹನುಮಂತರಾಯರು, ಚಿಕ್ಕಮಗಳೂರಿಂದ ಶಿವಮೊಗ್ಗಕ್ಕೆ—ಡಿಸ್ಟ್ರಿಕ್ಟು ಖಜಾನೆ ಚಾರ್ಜಿನಲ್ಲಿರತಕ್ಕದ್ದು.

ಮಿ॥ ಆರ್. ಟಿ. ಮಹದೇವರಾಯರು, ಶಿವಮೊಗ್ಗೆಯಿಂದ ಚಿಕ್ಕಮಗಳೂರಿಗೆ—ಡಿಸ್ಟ್ರಿಕ್ಟು ಖಜಾನೆ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 22ನೆ ಸೆಪ್ಟಂಬರ್ 1909.

ನಂ. ಫೈ. 1746—ಸೆ. ರೆ. 48-09, ಮೈಸೂರು ಸರ್ವಿಸ್ಸು ರೆಗ್ಯುಲೇಷನಿನ 177ನೆ ಪ್ರಕರಣದ ಮೇರೆಗೆ, ಶಿವಮೊಗ್ಗ ಡಿಸ್ಟ್ರಿಕ್ಟು ಎಕ್ಸೈಜು ಆಫಿಸರಾದ ಮಿ॥ ಬಿ. ಭೀಮರಾಯರಿಗೆ 1909ನೆ ಇಸವಿ ಆಗಸ್ಟು 25ನೆ ತಾರೀಖು ಲಾಗಾಯಿತು ಒಂದು ತಿಂಗಳ ಪ್ರಿವಿಲೇಜು ರಜಾವನ್ನು ಮಂಜೂರ್ಮಾಡಲಾಯಿತು.

ತಾರೀಖು 21ನೆ ಸೆಪ್ಟಂಬರ್ 1909.

ನಂ. ರೆ. 2513—ಲ್ಯಾ. ಸರ್ವೆ. 35-08-5, ತುಮಕೂರು ಡಿಸ್ಟ್ರಿಕ್ಟಿನ ಪಾವಗಡ ತಾಲ್ಲೂಕಿನಲ್ಲಿ ಈ ಕೆಳಗೆ ನಮೂದಿಸಿರುವ ಗ್ರಾಮಗಳಿಗೆ 1883ನೆ ಇಸವಿಯ 4ನೆ ನಂಬರ ರೆಗ್ಯುಲೇಷನಾದ ಲ್ಯಾಂಡ್ ರೆವಿನ್ಯೂ ಕೋಡಿನ ನಿಯಮಗಳ ಪ್ರಕಾರ ರಿವಿಜ್ಡ್ ಸೆಟ್ಲ್‌ಮೆಂಟನ್ನು ಜಾರಿಯಲ್ಲಿ ತರುವಂತೆ ಹುಕುಂ ಆಗಿರುವುದರಿಂದ, ಸದರಿ ಕೋಡಿನ 112ನೆ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಸದರಿ ಸೆಟ್ಲ್‌ಮೆಂಟಿನಲ್ಲಿ ಠರಾವಾದ ಕಂದಾಯವು 1910-11ನೆ ರೆವಿನ್ಯೂ ಸಾಲಿನ ಆಗಾಯಿತು 1939-40ನೆ ಸಾಲಿನವರೆಗೆ ಆಗುವ ಮುವ್ವತ್ತು ವರ್ಷಗಳ ಪರ್ಯಂತ ಕಾಯಮಾಗಿರತಕ್ಕದ್ದೆಂದು ಪ್ರಕಟಿಸಿ ಸರ್ಕಾರದವರು ಹುಕುಂ ದಯಪಾಲಿಸಿರುವ ಸಂಗತಿಯನ್ನು ಈ ಮೂಲಕ ಸಮಸ್ತರ ತಿಳಿವಳಿಕೆಯ ಬಗ್ಗೆ ಪ್ರಸಿದ್ಧಪಡಿಸಿ ಇದೆ :—

ನಂಬರ್.	ಗ್ರಾಮದ ಹೆಸರು.	ನಂಬರ್.	ಗ್ರಾಮದ ಹೆಸರು.
1	ಪಾವಗಡ	47	ವಲ್ಲೂರು
2	ಬೊಮ್ಮತನಹಳ್ಳಿ	48	ವ್ಯಾಪತಿ
3	ಕಡವಲಕುಂಟೆ	49	ಅನ್ನದಾನಪುರ
4	ದಂಡೇನಹಳ್ಳಿ	50	ಕ್ಯಾತಗನಚರ್ಲು
5	ಅರಳಿಕುಂಟೆ	51	ಬಾಲಸಮುದ್ರ
6	ಕೊಡವಡಗು	52	ಕ್ಯಾದಿಗುಂಟೆ
7	ರಾಜವಂತಿ	53	ಪೆಂಡ್ಲ ಜೀವಿ
8	ಕಡಪಲಕೆರೆ	54	ತಿರಮಣಿ
9	ಚಿಕ್ಕನಾಯಕನಹಳ್ಳಿ	55	ಬುಗಡೂರು
10	ಭಂಗಾರನಾಯಕನಬೆಟ್ಟ	56	ಹುಸೇನಪುರ
11	ಕನ್ನಮಡಿ	57	ನಾಗಲಮಡಕೆ
12	ಕೃಷ್ಣಗಿರಿ		
13	ಕೀಲಾರಲಹಳ್ಳಿ		1ನೆ ಕ್ಲಾಸಿನ ಜುಮ್ಲಾ.
14	ವೀರಲಗೊಂದಿ		
15	ಚಿಟ್ಟಗನಹಳ್ಳಿ	58	ಆಚಮ್ಮನಹಳ್ಳಿ
16	ಕಣಿವೆಹಳ್ಳಿ	59	ಕೊಮಾರಹಳ್ಳಿ
17	ನಲ್ಲಿಗಾನಹಳ್ಳಿ	60	ಸುಂಕರಲಕುಂಟೆ
18	ಬಾಲಮ್ಮನಹಳ್ಳಿ	61	ದೇವಲಕೆರೆ
19	ಪಾಲಕುಂಟೆ	62	ಕೊಂಡೆತಿಮ್ಮನಹಳ್ಳಿ
20	ಕೋಟೆಬಂಡೆ	63	ಬುಡನೆನಹಳ್ಳಿ
21	ಬ್ಯಾಡನೂರು	64	ತಿಮ್ಮನಾಯಿಕನಕೋಟೆ
22	ಗುಂಡ ಹಳ್ಳಿ	65	ಕೋಟೆಗುಡ್ಡ
23	ಜಂಗಮರಹಳ್ಳಿ	66	ಕಸಬಾ ನಿಡಗಲ್ಲು
24	ಹೊಸಹಳ್ಳಿ	67	ಮುಮ್ಮಡಿಸಾಗರ
25	ರಂಗಪ್ಪನಹಳ್ಳಿ	68	ಕೊಡಗೇನಹಳ್ಳಿ
26	ಅರಸಿಕೆರೆ	69	ಮುದ್ದಗನಹಳ್ಳಿ
27	ತುಮಕುಂಟೆ	70	ಗೊಲ್ಲನಕುಂಟೆ
28	ಮಡ್ಡಿ	71	ಹೊಟ್ಟೆಬೊಮ್ಮನಹಳ್ಳಿ
29	ಕರೆಕ್ಯಾತನಹಳ್ಳಿ	72	ಕ್ಯಾತಗಾನಹಳ್ಳಿ
30	ಮಂಗಲವಾಡ	73	ಪೆನ್ನಮ್ಮನಹಳ್ಳಿ
31	ಮರೂರು	74	ಜಾಡಿನಹಳ್ಳಿ
32	ಉದ್ದಗಟ್ಟ	75	ವಾದನಕಲ್ಲು
33	ಗುಜ್ಜಿನೋಡು	76	ಪೊಲೇನಹಳ್ಳಿ
34	ತಿಮ್ಮಣ್ಣನಾಯಿಕನಬೆಟ್ಟ	77	ಸಾಸಲಕುಂಟೆ
35	ದಾವದಬೆಟ್ಟ	78	ಕೆಂಚಮ್ಮನಹಳ್ಳಿ
36	ದೇವರಬೆಟ್ಟ	79	ದೊಡ್ಡೇನಹಳ್ಳಿ
37	ಕೋಣನಕುರಕಿ	80	ಓಬಳಾಪುರ
38	ಚನ್ನಕೇಶವಪುರ	81	ಕಾಶಿಪುರ
39	ಹರಿಹರಪುರ	82	ತಿಮ್ಮಲಾಪುರ
40	ಕೊಟ್ಟೂರು	83	ಸಿದ್ದಪ್ಪನಕಟ್ಟೆ
41	ಕಸಬಾ ಮೂಗದಲಬೆಟ್ಟ	84	ಬೆಳ್ಳಿಬಟ್ಟಲು
42	ಸೂಳೆನಾಯಕನಹಳ್ಳಿ	85	ಶೈಲಾಪುರ
43	ಪಾಲಹಳ್ಳಿ	86	ಬೊಮ್ಮನಾಗತಿಹಳ್ಳಿ
44	ಬುಡ್ಡರಡ್ಡಿಹಳ್ಳಿ	87	ಮಾದಲೇರಹಳ್ಳಿ
45	ತಿಮ್ಮಮ್ಮನಹಳ್ಳಿ	88	ನ್ಯಾಯುದಕುಂಟೆ
46	ಕಸಬಾ ರಾಯಚರ್ಲು	89	ಕಸಬಾ ಹೊಸಕೋಟೆ

ನಂಬರ್.	ಗ್ರಾಮದ ಹೆಸರು.	ನಂಬರ್.	ಗ್ರಾಮದ ಹೆಸರು.
90	ಗೌಡತಿಮ್ಮನಹಳ್ಳಿ	117	ತಿಮ್ಮಲಾಪುರ
91	ಜಲ್ಲೋಡು	118	ಹನುಮನಬೆಟ್ಟ
92	ಸಿದ್ದಾಪುರ	119	ನೀರಮ್ಮನಹಳ್ಳಿ
93	ರಾಜಮೂರನಹಳ್ಳಿ	120	ದಳವಾಯಿಹಳ್ಳಿ
94	ಕಾತಿಕ್ಯಾತನಹಳ್ಳಿ	121	ಕಾಮನದುರ್ಗ
95	ವಾರೆಮ್ಮನಹಳ್ಳಿ	122	ಕೆಂಚಗಾನಹಳ್ಳಿ
96	ತಿಪ್ಪಯ್ಯನದುರ್ಗ	123	ಮಾನಕುಂತಹಳ್ಳಿ
97	ಹೊಸಹಳ್ಳಿ	124	ಕನಿಕಲಬಂಡಿ
98	ಸಾರ್ವತಾಪುರ	125	ವಡ್ಡೇವು
99	ಮರದಾಸನಹಳ್ಳಿ	126	ಬೆಟ್ಟದಕೀಲಗಿನಹಳ್ಳಿ
100	ದಳವಾಯಿಹಳ್ಳಿ	127	ಕ್ಯಾತಗಾನಕೆರೆ
101	ಹೊಸದುರ್ಗ	128	ಎತ್ತಿನಹಳ್ಳಿ
102	ಹನುಮಂತನಹಳ್ಳಿ	129	ಗಂಗಸಾಗರ
103	ಚಿಕ್ಕಹಳ್ಳಿ	130	ತೋಪಗಾನದೊಡ್ಡಿ
104	ನಿಂಗಲಾಪುರ	131	ಉಪ್ಪಾರಹಳ್ಳಿ
105	ಪೋಟಗಾನಹಳ್ಳಿ	132	ಕಂಬಲಹಳ್ಳಿ
106	ತಿಮ್ಮಮ್ಮನಹಳ್ಳಿ	133	ಶ್ರೀರಂಗಪುರ
107	ಕೂನಿಹಳ್ಳಿ	134	ಕನಬಾ ಗುಮ್ಮಗಟ್ಟ
108	ಬುಮ್ಮನಕುಂಟೆ	135	ನೇರಲಕುಂಟೆ
109	ಬೂದಿಬೆಟ್ಟ	136	ದೊಮ್ಮತಮಾರಿ
110	ತಿಪ್ಪಗಾನಹಳ್ಳಿ	137	ಕನಕಪುರ
111	ಕನಬಾ ಪೆನ್ನಸಮುದ್ರ	138	ಮಾಚರಾಜನಹಳ್ಳಿ
112	ಶಿಂಗರಡ್ಡಿಹಳ್ಳಿ	139	ವಿರುಪಸಮುದ್ರ
113	ತಳಮರದಹಳ್ಳಿ	140	ಗವಡೆಶ್ಚ
114	ಎರ್ರಮ್ಮನಹಳ್ಳಿ		2ನೆ ಕ್ಲಾಸ್ ಜುಮ್ಲಾ.
115	ಹೊಸಹಳ್ಳಿ		ಒಟ್ಟು ಜುಮ್ಲಾ.
116	ದಾಸರಮ್ಮನಹಳ್ಳಿ		

ತಾರೀಖು 27ನೆ ಸೆಪ್ಟಂಬರ್ 1909.

ನಂ. ರೆ. 2743—ಲ್ಯಾ. ರೆ. 138-09-2, 1909ನೆ ಇಸವಿ ಸೆಪ್ಟಂಬರ್ 17ನೆ ತಾರೀಖಿನ ರೆವಿನ್ಯೂ 2414—ಲ್ಯಾ. ರೆ. 75-09-5ನೆ ನಂಬರ ಇಸ್ತಿಹಾರ್ನಾಮೆಯ ಪ್ರಕಾರ ಚಿತ್ರದುರ್ಗ ತಾಲ್ಲೂಕಿಗೆ ವರ್ಗವಾಗಿರುವ ಮಿ|| ಅಬ್ದುಲ್ ಹಕೀಂ, ಬಿ.ಎ. ಯವರನ್ನು ಹೊಳಲಕೆರೆ ತಾಲ್ಲೂಕಿಗೆ ವರ್ಗಾಯಿಸಿರುತ್ತದೆ.

2. ಹೊಳಲಕೆರೆ ತಾಲ್ಲೂಕು ಅಮಲ್ದಾರ್ ಮಿ|| ಸಿ. ವಿ. ಕೃಷ್ಣಸ್ವಾಮಿರಾವ್, ಬಿ.ಎ. ಯವರನ್ನು ಚಿತ್ರದುರ್ಗ ತಾಲ್ಲೂಕಿಗೆ ವರ್ಗ ಮಾಡಿರುತ್ತದೆ.

ತಾರೀಖು 22ನೆ ಜೂನ್ 1909.

ನಂ. ಜನರಲ್ 7241, ಸರ್ಕಾರಿ ಅಥವಾ ಖಾಸಗಿ ಕೆಲಸದ ಉದ್ದಿಶ್ಯ ದಿವಾನ್ ಸಾಹೇಬರವರ ಭೇಟಿಗಾಗಿ ಬರುವ ಸರ್ಕಾರೀ ಉದ್ಯೋಗಸ್ಥರಿಗೂ ಇತರರಿಗೂ ಸಹ ಸರ್ಕಾರೀ ರಜಾ ದಿವಸಗಳಲ್ಲದ ಸೋಮವಾರ, ಬುಧವಾರ ಮತ್ತು ಶುಕ್ರವಾರದ ದಿವಸಗಳಲ್ಲಿ ಮಧ್ಯಾಹ್ನ 3 ಘಂಟೆ ಆಗಾಯಿತು 5 ಘಂಟೆಯ ವರಗೆ ದಿವಾನ್‌ಸಾಹೇಬರವರ ಆಫೀಸಿನಲ್ಲಿ ಭೇಟಿ ದೊರೆಯುವುದು. ವಿಶೇಷ ಜರೂರು ಸಂದರ್ಭಗಳಿಗೂ, ಭೇಟಿಯ ಬಗ್ಗೆ ಮೊದಲೇ ಕಾಲ ನಿಷ್ಕರ್ಷೆಯಾಗಿರುವ ಸಂದರ್ಭಗಳಿಗೂ ಸಹ ಈ ನಿಯಮವು ಅನ್ವಯಿಸುವುದಿಲ್ಲ.

ಹುಕುಂ ಬವೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮ ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರೆಟರಿ.